ಇದನ್ನು ಅವಲೋಕಿಸಬೇಕೆಂದರೆ ಈ 'ಬರೆಯುವುದ'ರ ಹುಟ್ಟಿನಿಂದಲೆ ಶುರು ಮಾಡಬೇಕಾಗುತ್ತದೆ.

ಮನುಷ್ಯ ಪ್ರಾಣಿ ಅದು ಹೇಗೆ ಉಳಿದ ಪ್ರಾಣಿಗಳಿಗಿಂತ ಮುಂದುವರಿದ ಅನ್ನುವುದಕ್ಕೆ ಹಲವು ಸಂಶೋಧನೆಗಳಾಗಿವೆಯಷ್ಟೇ. ಅದಕ್ಕೆ ಹಲವು ಬಗೆಯ ಉತ್ತರಗಳೂ ನಮಗೆ ಲಭ್ಯವಿವೆ. ಯುವಲ್ ಹರಾರಿಯ ಪ್ರಕಾರ, ಉಳಿದ ಪ್ರಾಣಿಗಳಲ್ಲಿಲ್ಲದ ಕಥೆ ಕಟ್ಟುವ ಕಲೆಯೇ ಮನುಷ್ಯನನ್ನು ಇಲ್ಲಿಯವರೆಗೂ ತಂದು ನಿಲ್ಲಿಸಿದೆ. 'ಕೊಳದಲ್ಲಿ ಹುಲಿಯೊಂದು ನೀರು ಕುಡಿಯುತ್ತಿದೆ, ಯಾರೂ ಹತ್ತಿರ ಹೋಗಬೇಡಿ' ಅನ್ನುವುದನ್ನು ಪ್ರಾಣಿಯೊಂದು ತನ್ನ ಬಳಗಕ್ಕೆ ಹೇಳುವಾಗ, ಈ ನಿರ್ದಿಷ್ಟ ಮಾಹಿತಿಯನ್ನಷ್ಟೇ ತನ್ನ ಭಾಷೆಯಲ್ಲಿ ರವಾನಿಸಲು ಶಕ್ಯ. ಆದರೆ, ಮನುಷ್ಯ ಹಾಗಲ್ಲವಲ್ಲ, ಆತ ಇದನ್ನು ನನ್ನ ಒಡನಾಡಿಗಳಿಗೆ ಹೇಳಬೇಕಾದಾಗ, ಆ ಪ್ರಸಂಗದ ಸುತ್ತ ಒಂದು ಕಥೆಯನ್ನೇ ಹೆಣೆಯಬಲ್ಲ. ಹುಲಿಯನ್ನೂ ಸುತ್ತಲ ಪರಿಸರವನ್ನೂ ನಾನಾ ರೀತಿಯಲ್ಲಿ ವರ್ಣಿಸಬಲ್ಲ. ಹಾಗೂ ಕೇಳಿಸಿಕೊಳ್ಳುವ ಮನುಷ್ಯ ಅದನ್ನು ಮತ್ತ್ಯಾವುದೋ ರೀತಿಯಲ್ಲಿ ಅರ್ಥೈಸಿಕೊಳ್ಳಬಲ್ಲ. ಇವೆಲ್ಲದರ ಹಿಂದಿರುವುದು ಆತನ ಕಲ್ಪನಾ ಸಾಮರ್ಥ್ಯ. ಈ ಕಲ್ಪನಾ ಶಕ್ತಿಯೇ ಮನುಷ್ಯನ ಬರವಣಿಗೆಯ ಕಲೆಗೂ ಪೂರಕವಾಗಿ ಒದಗಿ ಬಂದುದು.

ಶೂನ್ಯದಿಂದ ಯಾವುದರ ಸೃಷ್ಟಿಯೂ ಸಾಧ್ಯವಿಲ್ಲ ಎಂದಾದಮೇಲೆ, ಕಲ್ಪನೆ ಕೂಡಾ ಹುಟ್ಟಲು ಸಾಧ್ಯವಿಲ್ಲವಷ್ಟೇ? ಪ್ರತಿ ಕಲ್ಪನೆಗೂ ಯಾವುದಾದರೂ ಒಂದು ಹಿನ್ನೆಲೆ ಇದ್ದೇ ಇದೆ. ಹೀಗಾಗಿ, ಆ ಕಲ್ಪನೆಯ ಮೂಲಕವೇ ಹುಟ್ಟುವ ಬರವಣಿಗೆಗೆ ಕೂಡಾ ಒಂದಲ್ಲಾ ಒಂದು ಆಧಾರ ಇರಬೇಕಾದದ್ದು ದಿಟವೇ. ಹಾಗೆ ಬರೆಯಲಾದುದು ಎಲ್ಲೋ ಒಂದು ಕಡೆ, ಯಾವುದೋ ಒಂದು ರೂಪದಲ್ಲಿ ಜರುಗಬಹುದಾದ ಸಂಭವನೀಯತೆಯನ್ನು ಸಾರಾಸಗಟಾಗಿ ತಳ್ಳಿ ಹಾಕಬಹುದೇ? ನಿರ್ಧಾರಕ್ಕೆ ಬರುವ ಮುನ್ನ ಕೆಲವು ಉದಾರಣೆಗಳನ್ನು ಗಮನಿಸುವುದೊಳಿತು.

ಅಮೆರಿಕನ್ ಲೇಖಕ ಮೊರ್ಗನ್ ರಾಬರ್ಟ್‌ಸನ್‌ನ ಕಾದಂಬರಿ 'ಫ್ಯುಟಿಲಿಟಿ'ಯಲ್ಲಿ ಟೈಟಾನ್ ಎನ್ನುವ ಬೃಹತ್ ಹಡಗು ಸಮುದ್ರದ ನಡುವೆ ಮಂಜುಗಡ್ಡೆಗೆ ಡಿಕ್ಕಿ ಹೊಡೆದು ಮುಳುಗುವ ಘಟನೆಯಿದೆ. ನಾವೆಲ್ಲ ಬಲ್ಲ ಟೈಟಾನಿಕ್ ದುರಂತ ನಡೆದುದು ಈ ಕಾದಂಬರಿ ಪ್ರಕಟವಾಗಿ ಹದಿನೈದು ವರ್ಷಗಳ ಬಳಿಕ! ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷನಾದಂತೆ 2000ದ ಇಸವಿಯಲ್ಲೇ ಕಾರ್ಟೂನೊಂದು ಬಿತ್ತರವಾದಾಗ, ಟ್ರಂಪ್ ರಾಜಕೀಯವನ್ನು ಪ್ರವೇಶಿಸಿಯೇ ಇರಲಿಲ್ಲ. ಅದೆಲ್ಲ ಯಾಕೆ? ಚೀನಾದ ಪ್ರಯೋಗಾಲಯದಿಂದ ಹೊರಬಿದ್ದ ವೈರಸ್ಸೊಂದು ಇಡೀ ಜಗತ್ತನ್ನೇ ತಲ್ಲಣಗೊಳಿಸುವ ಸಂಗತಿ ನಲವತ್ತು ವರ್ಷಗಳ ಹಿಂದಿನ 'ಐಸ್ ಆಫ್ ಡಾರ್ಕ್‌ನೆಸ್' ಪುಸ್ತಕದ ಪುಟಗಳಲ್ಲಿಯೂ ಇದ್ದುದನ್ನು ಯಾರೂ ಅಲ್ಲಗಳೆಯುವಂತಿಲ್ಲ, ತಾನೆ? ಇವೆಲ್ಲ ಕಾಕತಾಳೀಯ ಸಂಗತಿಗಳು ಅಂದುಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಆದರೆ, ಈ ಮೇಲಿನ ಕಾದಂಬರಿಗಳಲ್ಲಿ ಅನುಕ್ರಮವಾಗಿ ಮುಳುಗಿದ ಹಡಗಿನ ಹೆಸರು 'ಟೈಟಾನ್' ಎಂದೂ, ವೈರಸ್ಸಿನ ಹೆಸರು 'ವುಹಾನ್–400' ಎಂದೂ ಉಲ್ಲೇಖಗೊಂಡಿರುವುದು ಯಾವುದೇ ಕಾಕತಾಳೀಯತೆಗೂ ಸೆಡ್ಡುಹೊಡೆಯುವಂಥದ್ದು. ಕಾರ್ಟೂನಿನಲ್ಲಿ ತೋರಿಸಿದ ಯಥಾವತ್ ಶೈಲಿಯಲ್ಲೇ ಅಧ್ಯಕ್ಷಗಿರಿಗೇರಿದ ಟ್ರಂಪ್ ಕೂಡಾ ಎಲಿವೇಟರೊಂದರಲ್ಲಿ ಇಳಿದು ಬರುವುದು ವಿವರಣೆಗೆ ನಿಲುಕದ ಅಚ್ಚರಿ.

ಮನುಷ್ಯನ ಕಲ್ಪನೆಯ ಉತ್ತುಂಗದ ಸೃಷ್ಟಿಗಳಾದ ಮ್ಯಾಜಿಕ್ ರಿಯಲಿಸಂ, ಫ್ಯಾಂಟಸಿ ಇತ್ಯಾದಿ ಬರಹ ಪ್ರಕಾರಗಳ ಬಗ್ಗೆ ಏನನ್ನೋಣ? ಜಗತ್ತಿನ ಘಟಾನುಘಟಿ ಸಾಹಿತಿಗಳೂ ತಮ್ಮ ಕೃತಿಗಳಲ್ಲಿ – ದೊಡ್ಡ ರೆಕ್ಕೆಗಳುಳ್ಳ ಮುದುಕ, ಬೆಳಗೆದ್ದು ನೋಡುತ್ತಲೇ ಹಾಸಿಗೆಯಲ್ಲೇ ಹುಳವಾದ ಮನುಷ್ಯ... ಇತ್ಯಾದಿಗಳನ್ನೆಲ್ಲ ಕಟ್ಟಿಕೊಡುವಾಗ ಅವರ ಈ ಅಸಾಧ್ಯ ಗ್ರಹಿಕೆಯ ಹಿನ್ನೆಲೆ ಏನಿದ್ದಿರಬಹುದು? ಕೇವಲ ಕಪೋಲಕಲ್ಪಿತ ಸಂಗತಿಗಳನ್ನು ಹುಟ್ಟುಹಾಕಿ ಕಥೆ ಹೇಳುವ ಸೀಮಿತ ಉದ್ದೇಶದಿಂದ ಅವರೆಲ್ಲ ಈ